ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

<u>ಸಿ.ಸಿ. ನಂ.: 305/2020</u>

.......................................................................

CW 15
PW 08

ಹೆಸರು : ಮುತ್ತಪ್ಪ ಲಮಾನಿ
ತಂದೆಯ ಹೆಸರು : ಬಸಪ್ಪ
ವಯಸ್ಸು : 42 ವರ್ಷ
ಉದ್ಯೋಗ : ಮುಖ್ಯ ಪೇದೆ, ಜೋಯಿಡಾ ಪೊಲೀಸ ಠಾಣೆ,
ವಾಸಸ್ಥಳ : **ಹಳಿಯಾಳ.**

ದಿನಾಂಕ 06-03-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ</u>** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ದಿನಾಂಕ 2018 ರಿಂದ 2023 ರವರಗೆ ಹಳಿಯಾಳ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 24-01-2020 ರಂದು ನಾನು ಠಾಣಾ ಪ್ರಭಾರದಲ್ಲಿ ಇದ್ದಾಗ ಚಾಸಾ 1 ರವರು ಠಾಣೆಗೆ ಹಾಜರಾಗಿ ಗಣಕೀಕೃತ ದೂರನ್ನು ನೀಡಿದ್ದು ಅದನ್ನು ಸ್ವೀಕರಿಸಿ, ಹಳಿಯಾಳ ಠಾಣಾ ಗುನ್ನಾ ನಂಬರ 13/2020 ಅನ್ನು ಕಲಂ 279, 304A IPC ರಡಿಯಲ್ಲಿ ದಾಖಲಿಸಿ ಪ್ರ.ವ.ವ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ದೂರನ್ನು ಈಗಾಗಲೇ ನಿಪಿ 3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ 3 ಬಿ ಎಂದು** ಗುರುತಿಸಲಾಯಿತು. ಪ್ರ.ವ.ವ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 21 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ 21 ಎ ಎಂದು** ಗುರುತಿಸಲಾಯಿತು.

ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 16 ರವರಿಗೆ ವಹಿಸಿಕೊಟ್ಟಿರುತ್ತೇನೆ.

**<u>ಪಾಟೀ ಸವಾಲು</u> :** ಆರೋಪಿ ಪರ ಶ್ರೀ ಎ ಎಫ್ ಕೆ ವಕೀಲರಿಂದ.

ಚಾಸಾ 15 ರವರು ನಿಮ್ಮ ಇಲಾಖಾ ಸಿಬ್ಬಂದಿಯವರು ಎಂದರೆ ಸರಿ. ಚಾಸಾ 16 ಮತ್ತು 17 ರವರು ನಿಮ್ಮ ಇಲಾಖಾ ಮೇಲಾಧಿಕಾರಿಗಳು ಎಂದರೆ ಸರಿ. ಚಾಸಾ 1 ರವರು ಠಾಣೆಗೆ ಹಾಜರಾಗಿ ಯಾವುದೇ ದೂರನ್ನು ನೀಡಿಲ್ಲ ಎಂದರೆ ಸರಿಯಲ್ಲ. ಮೃತ ರ ಕುಟುಂಬಕ್ಕೆ ಪರಿಹಾರ ಸಿಗಲು ಅನುಕೂಲ ಆಗುವಂತೆ ದೂರನ್ನು ನೀವೆ ತಯಾರಿಸಿರುತ್ತೀರಿ ಎಂದರೆ ಸರಿಯಲ್ಲ. ಅಪಘಾತ ಆರೋಪಿತನ ತಪ್ಪಿನಿಂದ ಆಗಿಲ್ಲ, ಚಾಸಾ 16 ಮತ್ತು 17 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.